ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಅಧ್ಯಕ್ಷರೇ, ಆರನೇ ಉಪನಾಲೆಯಲ್ಲಿ ಆಗಿರತಕ್ಕ ಅವ್ಯವಹಾರದ ಬಗ್ಗೆ ಸದಸ್ಯರು ಕೇಳುತ್ತಿದ್ದಾರೆ. ಆ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಹೊಸನಗರದ ಕೊಡಚಾದ್ರಿ ಪ್ರಥಮ ದರ್ಜೆ ಕಾಲೇಜು ಕಟ್ಟಡದ ಬಗ್ಗೆ

೩೬೨. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ನೀರಾವರಿ, ಲೋಕೋಪಯೋಗಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸನಗರ ಕೊಡಚಾದ್ರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಯ ಅಂದಾಜನ್ನು ಹಿಂದಿನ ಸಾಲಿನ ಆಯವ್ಯಯದಲ್ಲಿ ಸೇರಿಸಲಾಗಿದೆಯೆ?

ಆ) ಹಾಗಿದ್ದಲ್ಲಿ ವೆಚ್ಚ ಎಷ್ಟು ?

ಇ) ಕಟ್ಟಡ ನಿರ್ಮಾಣಕ್ಕೆ ಎಷ್ಟು ಕಾಲ ಬೇಕಾಗುತ್ತದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಸ್ವಾಮಿರಾವ್ ಬಿ.—ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಈ ಸಣ್ಣ ಉತ್ತರದಲ್ಲಿ ನಮಗೆ ಸಮಾಧಾನಿಯಿಷಿ ಕೊಟ್ಟರೆ ಸಾಕಾಗುವುದಿಲ್ಲ, ಸ್ವಲ್ಪ ವಿವರಗಳನ್ನು ಕೊಡಬೇಕಾಗುತ್ತದೆ. ಏಕೆಂದರೆ ನಮ್ಮ ಕ್ಷೇತ್ರದಲ್ಲಿರತಕ್ಕ ಅತಿ ಮುಖ್ಯವಾದ ವಿಷಯಗಳನ್ನು ಇಲ್ಲಿ ಕೊಟ್ಟಿರುತ್ತೇವೆ. ಎಲ್ಲದಕ್ಕೂ ಇಲ್ಲ, ಉದ್ಭವಿಸುವುದಿಲ್ಲ, ಉದ್ಭವಿಸುವುದಿಲ್ಲ ಎಂದು ಉತ್ತರ ಕೊಟ್ಟು ಇಷ್ಟರಲ್ಲೇ ಮುಗಿಸಿದರೆ ಆಗುವುದಿಲ್ಲ. ಹಿಂದಿನ ಸರ್ಕಾರ ಕೊಡಚಾದ್ರಿ ಕಾಲೇಜು ಕಟ್ಟಡವನ್ನು ಬಜೆಟ್‌ನಲ್ಲಿ ಸೇರಿಸಿದ್ದೇವೆಂದು ಹೇಳಿತ್ತು. ಅದ್ಯಾವುದೋ ಪದ್ಧತಿ ಪ್ರಕಾರ ೫೦-೬೦ಲಕ್ಷ ಗ್ರಾಂಟ್ ಆಗಿ, ೫ ಸಾವಿರ ರೂಪಾಯಿ ಟೋಕನ್ ಗ್ರಾಂಟ್ ಆಗಿ ಇಟ್ಟಿದ್ದೇವೆಂದು ಹೇಳಿದ್ದರು. ಆದರೂ ಕೆಲಸ ಪ್ರಾರಂಭ ಆಗಿಲ್ಲ, ಎಸ್ಟಿಮೇಟ್ ಆಗಿಲ್ಲ. ಆದ್ದರಿಂದ ಈಗಲಾದರೂ ಮಂತ್ರಿಗಳು ಆಶ್ವಾಸನೆ ಕೊಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧ್ಯಕ್ಷರೆ, ಕೊಡಚಾದ್ರಿ ಪ್ರಥಮ ದರ್ಜೆ ಕಾಲೇಜಿಗೆ ೬೦ ಲಕ್ಷ ರೂಪಾಯಿಗಳ ಅಂದಾಜು ತಯಾರಾಗಿರುವುದು ನಿಜ. ಬಜೆಟ್‌ನಲ್ಲಿ ಕೇವಲ ೧ ಸಾವಿರ ರೂಪಾಯಿಗಳನ್ನು ಇಟ್ಟಿದ್ದು ಆಡಳಿತಾತ್ಮಕ ಮಂಜೂರಾತಿ ಕೊಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ೧೯೮೯-೯೦ರ ಬಜೆಟ್‌ನಲ್ಲಿ ಕೂಡ ಅದನ್ನು ಸೇರಿಸಲಿಲ್ಲ. ಮತ್ತು ಈ ವರ್ಷ ಹೊಸ ಆಯವ್ಯಯದಲ್ಲೂ ಸೇರಿಸುವುದಕ್ಕಾಗಲಿಲ್ಲ.

೧೦-೪೦ ಎ. ಎಂ.

ಹಣಕಾಸಿನ ಕೊರತೆ ಮತ್ತು ಇದಕ್ಕೆ ಒದಗಿಸಬೇಕಾದ ಮೂರನೇ ಒಂದು ಭಾಗದ ಹಣವನ್ನು ಇಡುವುದಕ್ಕೆ ಆಗದೇ ಇರುವುದರಿಂದ ಇದನ್ನು ಮಾಡುವುದಕ್ಕೆ ಆಗಿಲ್ಲ. ಸನ್ಮಾನ್ಯ ಸದಸ್ಯರು ಹೇಳಿದಹಾಗೆ ಇದು ಬಹಳ ಮುಖ್ಯ ಇದೆ. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಇವತ್ತು ೪೬ ಲಕ್ಷ ರೂಪಾಯಿಗಳನ್ನು ಒಟ್ಟಿಗೆ ಕೊಡುವುದಕ್ಕೆ ಆಗದೇ ಇದ್ದರೆ ಮೊದಲ ಕಂತಾಗಿ ಅರ್ಧ ಭಾಗವನ್ನಾದರೂ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅದನ್ನು ಮಾಡಬೇಕಾದರೂ ಕೂಡಾ ೧೨ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಹಣಕಾಸಿನ ಪರಿಸ್ಥಿತಿಯ ಬಗ್ಗೆ ನಾನು ಹೇಳಿದ್ದೇನೆ. ಈ ವರ್ಷ ಮಾಡುವುದು ಕಷ್ಟವೆಂಬುದನ್ನು ಅವರ ಗಮನಕ್ಕೆ ತಂದಿದ್ದೇನೆ. ನಮ್ಮ ಹಣಕಾಸಿನ ಸ್ಥಿತಿ ಸುಧಾರಿಸಿದ ನಂತರ ಅದನ್ನು ನಾವು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.